ಒಂದು ಒಳ್ಳೆಯ ವಾತಾವರಣ ನಿರ್ಮಾಣವಾಗಲಿ. ದಯವಿಟ್ಟು ಸದನವನ್ನು ಮುಂದಕ್ಕೆ ಹಾಕಿ.

(ಅಡಚಣೆ)

ಅಧ್ಯಕ್ಷರು: ಈಗ ಸದನವನ್ನು ಅರ್ಧ ಗಂಟೆಗಳ ಕಾಲ ಮುಂದೂಡಲಾಗಿದೆ.

(ಸದನವು 11 ಗಂಟೆಗೆ ಮುಂದೂಡಲ್ಪಟ್ಟು ಅರ್ಧ ಗಂಟೆ ನಂತರ ಸಮಾವೇಶಗೊಳ್ಳಲು ನಿರ್ಧರಿಸಿತು).

(ಪುನಃ ಸದನವು ಮಧ್ಯಾಹ್ನ 1 ಗಂಟೆ 12 ನಿಮಿಷಕ್ಕೆ ಸಮಾವೇಶಗೊಂಡಿತು, ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು. ಕಾಂಗ್ರೆಸ್ ಸದಸ್ಯರೆಲ್ಲಾ ಸದನದ ಬಾವಿಯಲ್ಲಿ ನಿಂತಿದ್ದರು).

3. ಮಾನ್ಯ ಸಚಿವರಿಗೆ ರಕ್ಷಣೆ ನೀಡುವ ಬಗ್ಗೆ

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ರಮೇಶ್ ಕುಮಾರ್‌ರವರು, ನಿನ್ನೆ ಸದನದಲ್ಲಿ, ನನಗೆ, ಕೊಲೆ ಮಾಡುತ್ತೇನೆ, ಹಾಗೂ ನಮಗೆ ಹೆದರಿಕೆಯಾಗುವಂತಹ ಬೆದರಿಕೆಯನ್ನು ನೀಡಿದ್ದಾರೆ, ಸದನದಲ್ಲೇ ಹೀಗಾದರೆ ಹೊರಗಡೆ ನಮ್ಮ ಪಾಡೇನು? ಆದುದರಿಂದ ನಮಗೆ ಸೂಕ್ತ ರಕ್ಷಣೆ ಕೊಡಬೇಕು, ನಿನ್ನೆ ಕಂಪ್ಲೇಂಟ್ ಕೊಟ್ಟಿದ್ದೇನೆ, ಆ ಬಗ್ಗೆ ಏನು ನಿರ್ಧಾರವನ್ನು ತೆಗೆದುಕೊಂಡಿದ್ದೀರಿ, ದಯಮಾಡಿ ನಮಗೆ ರಕ್ಷಣೆ ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಮತ್ತೆ ಮಾತುಕತೆ ಅಪೂರ್ಣವಾಗಿದೆ, ಮತ್ತೆ ತಮ್ಮಲ್ಲಿ ಮನವಿ ಮಾಡುತ್ತೇನೆ, ಈ ಅಪೂರ್ಣವಾಗಿರುವಂತಹ ಮಾತುಕತೆಯನ್ನು ಮುಂದುವರೆಸುವುದಕ್ಕೆ, ಸ್ವಲ್ಪ ಕಾಲ ಸದನವನ್ನು ಮುಂದೂಡಿ, ಮತ್ತೆ ಮಾತುಕತೆಗೆ ಅವಕಾಶ ಮಾಡಿಕೊಡಿ.

(ಈ ಸಂದರ್ಭದಲ್ಲಿ ಕಾಂಗ್ರೆಸ್ ಸದಸ್ಯರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು: ಮಾನ್ಯ ಚೆಲುವರಾಯಸ್ವಾಮಿ, ಸಾರಿಗೆ ಸಚಿವರು, ಇವರು ಇವತ್ತು ಮಧ್ಯಾಹ್ನ ಒಂದೂವರೆ ಗಂಟೆಗೆ ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ ಮಾನ್ಯ ಸದಸ್ಯರಿಗೆಲ್ಲಾ ಭೋಜನ ಕೂಟವನ್ನು ಏರ್ಪಡಿಸಿದ್ದಾರೆ, ದಯಮಾಡಿ, ಆಗಮಿಸಬೇಕೆಂದು ಆಹ್ವಾನ ನೀಡಿದ್ದಾರೆ, ಅದನ್ನು ಪ್ರಕಟಣೆ ಮಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಸರ್, ತಾವು ಅಡ್ಜಮೆಂಟ್ ಮೋಷನ್ ಅನ್ನು ತಳ್ಳಿ ಹಾಕಿದ್ದೀರಿ, ರೂಲ್ 69 ರಲ್ಲಾದರೂ ಚರ್ಚೆಯಾಗುವುದಕ್ಕೆ ಒಂದು ಅವಕಾಶ ಮಾಡಿಕೊಟ್ಟರೆ, ಈ ಬಗ್ಗೆ ಒಂದಿಷ್ಟು ಚರ್ಚೆಯನ್ನಾದರೂ ಮಾಡೋಣ.

(ಕಾಂಗ್ರೆಸ್ ಸದಸ್ಯರು ಸದನದ ಬಾವಿಯಲ್ಲಿ ನಿಂತು ಘೋಷಣೆ ಕೂಗುತ್ತಿದ್ದರು)

ಅಧ್ಯಕ್ಷರು: ನೋಡೋಣ, ಈಗ ಸದನವನ್ನು ಮಧ್ಯಾಹ್ನ ಮೂರು ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಗಂಟೆ 14 ನಿಮಿಷಕ್ಕೆ ಮುಂದೂಡಲ್ಪಟ್ಟು, ಪುನಃ ಮಧ್ಯಾಹ್ನ 3.00 ಗಂಟೆಗೆ ಸೇರಲು ನಿರ್ಧರಿಸಿತು).

(ಸದನವು 4.00 ಗಂಟೆಗೆ ಸಮಾವೇಶಗೊಂಡಿತು)

(ಸನ್ಮಾನ್ಯ ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

4. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಶ್ರೀ ಜನಾರ್ಧನರೆಡ್ಡಿ ಪ್ರಕರಣವನ್ನು ನಿಯಮ 69ರಲ್ಲಿ ಚರ್ಚಿಸಲು ಅನುಮತಿ ಕೋರಿಕೆ

(ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)

ಶ್ರೀ ಎನ್. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) (ತಮ್ಮ ಸ್ಥಾನಕ್ಕೆ ತೆರಳಿ): ಈಗಾಗಲೇ ವಾಟಾಳ್ ನಾಗರಾಜ್‌ರವರು, ಮಾಧುಸ್ವಾಮಿಯವರು ಮತ್ತು ರೆಡ್ಡಿಯವರು, ನಮ್ಮ ರಾಜೇಂದ್ರನ್‌ರವರು ಮತ್ತು ಹೆಗ್ಡೆಯವರು ನಾವೆಲ್ಲರೂ ಸೇರಿ ತಮ್ಮ chamber ಗೆ ಬಂದು ಮಾತುಕತೆ ನಡೆಸಿದ್ದೇವೆ. ಆದರೆ, ತಮ್ಮ ಹೇಳಿಕೆಯ ಮೇಲೆ ನಾವೆಲ್ಲರೂ ಕೂಡ ಬಂದಿದ್ದೇವೆ ಮತ್ತು ಅದರಲ್ಲಿ ವಿಶೇಷವಾಗಿ ವಾಟಾಳ್ ನಾಗರಾಜ್, ಮಾಧುಸ್ವಾಮಿಯವರು ಎಲ್ಲರೂ ಕೂಡ ಮಾತನಾಡತಕ್ಕಂಥ ಅಭಿಪ್ರಾಯದ ಮೇರೆಗೆ ನಾವು ಮಾತುಕತೆಗೆ ಬಂದಿದ್ದೇವೆ. ನಾವು CBI enquiry ಬಗ್ಗೆ ಮತ್ತು ಈ ಒಂದು ವಿಷಯದ ಮೇಲೆ ಆಗಲೇ ಬೇಕೆಂದು ಕೇಳಿದಾಗ ಅದರ ಬಗ್ಗೆ ಅವರು ಒಪ್ಪಲಿಲ್ಲ. ಸರ್ಕಾರದವರು CBI enquiryಗೆ ಒಪ್ಪುವುದಿಲ್ಲ, judicial enquiry ಗೆ ಮಾತ್ರ BMIC ಯಲ್ಲಿ ಮತ್ತು ಇದರಲ್ಲಿ ಮಾತ್ರ ನಾವೆಂದೂ ಕೂಡ ಅದನ್ನು ಒಪ್ಪುವ ಪ್ರಶ್ನೆಯೇ ಬರುವುದಿಲ್ಲ, ನೀವೇನು ಮಾಡುತ್ತೀರಿ ನೀವು ಮಾಡಿ, ನಾವೇನು ಮಾಡಬೇಕು ಅದನ್ನು ಮಾಡುತ್ತೇವೆನ್ನತಕ್ಕಂಥ ಧಾಟಿಯಲ್ಲಿ ಮಾತನಾಡಿ ಕೊನೆಗೆ ಆ ಮಾತು ಹೆಚ್ಚು ಕಡಿಮೆ ಮುರಿದು ಹೋದ ಹಾಗೆ ಆಯಿತು. ಆದರೆ, ಈಗ ತಮ್ಮಲ್ಲಿ ನನ್ನ ಮನವಿ ಏನೆಂದರೆ, adjournment motion ಗೆ ತಾವು ಅನುಮತಿ ಕೊಡಲಿಲ್ಲ. Disallow ಮಾಡಿದಿರಿ. ಒಪ್ಪಿಕೊಳ್ಳೋಣ. ಆದರೆ, ಕನಿಷ್ಠ ಪಕ್ಷ ಆ ಒಂದು ಜನಾರ್ಧನರೆಡ್ಡಿ issue ವನ್ನು ಚರ್ಚೆ ಮಾಡುವುದಕ್ಕಾದರೂ ಅವಕಾಶ ಕೊಡಿ. Rule 69 ನಲ್ಲೇ ಅವಕಾಶ ಕೊಡಿ. ಅಷ್ಟಾದರೂ ತಾವು ಮಾಡಿದರೆ ಕನಿಷ್ಠ ಪಕ್ಷ.....

ಅಧ್ಯಕ್ಷರು: ಬೇಡಿಕೆ ಮೇಲೆ ಚರ್ಚೆ ಮಾಡಬಹುದೆಂದು ನಿನ್ನೆಯೇ ಹೇಳಿದೆನಲ್ಲಾ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಕನಿಷ್ಠ ಪಕ್ಷ ಆ ಒಂದು ಚರ್ಚೆಗೆ ಆಸ್ಪದ ಕೊಟ್ಟರೆ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕಾಗುತ್ತದೆ. ಆಮೇಲೆ,